(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ :– ತಾವು ಹೇಳಿದಂತೆ ಪ್ರಶ್ನೋತ್ತರವಾದ ಮೇಲೆ ಎಲ್ಲಾ ವಿಚಾರಗಳನ್ನು ಈ ಸದನದ ಮತ್ತು ತಮ್ಮ ಮುಂದೆ ಇಡುತ್ತೇವೆ.

ಶ್ರೀ ಸಿದ್ಧರಾಮಯ್ಯ :– This is not good. ಅಧಿಕಾರ ಇದೆಯೆಂದು ಏನು ಬೇಕಾದರೂ ಮಾಡಬಹುದೆಂದು ಅಂದುಕೊಂಡರೆ ಪ್ರಜಾಪ್ರಭುತ್ವದಲ್ಲಿ ಬಹಳ ಕಷ್ಟವಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ :– ಅಧಿಕಾರ ಇದೆಯೆಂದು ಬಹಳ ಸ್ವೇಚ್ಛಾಚಾರ ಮಾಡಿದರೆ ಅದು ಮೂರ್ಖತನ.

ಶ್ರೀ ಸಿದ್ಧರಾಮಯ್ಯ :– ಇದೇ ಆಗಿರುವುದು.

ಶ್ರೀ ಎಂ.ಪಿ. ಪ್ರಕಾಶ್ :– ಆದ್ದರಿಂದ, ಅದಕ್ಕೇನು ಉತ್ತರ ಕೊಡಬೇಕೋ ನಾನು ಕೊಡುತ್ತೇನೆ. ನಿಮ್ಮ ಗೌರವಕ್ಕಾಗಲಿ, ನಿಮ್ಮ ಹಕ್ಕಿಗಾಗಲೀ ಯಾವುದೇ ಚ್ಯುತಿ ಬರುವಂತೆ ಯಾವುದು ಆಗಿಲ್ಲ.

ಶ್ರೀ ಸಿದ್ಧರಾಮಯ್ಯ :– ಉತ್ತರ ಕೊಡುವುದಕ್ಕೇನಿದೆ?

ಅಧ್ಯಕ್ಷರು :– ಸಿದ್ಧರಾಮಯ್ಯನವರೆ, ಈಗ ಪ್ರಶ್ನೋತ್ತರವಾಗಲಿ. ಪ್ರಶ್ನೋತ್ತರವಾದ ಮೇಲೆ ಅವಕಾಶ ಕೊಡುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

ಡಾ॥ ಹೆಚ್.ಸಿ. ಮಹಾದೇವಪ್ಪ :– ಅಭಿವೃದ್ಧಿ ಕೆಲಸಗಳಲ್ಲಿ ಈ ರೀತಿ ಶಾಸಕರಿಗೆ ಆದರೆ ಹೇಗೆ?

ಅಧ್ಯಕ್ಷರು :– ಮಹಾದೇವಪ್ಪನವರೆ, ದಯಮಾಡಿ ಕುಳಿತುಕೊಳ್ಳಿ, ನಂತರ ಅವಕಾಶ ಕೊಡುತ್ತೇನೆ. ಲಾಲಾಜಿ ಆರ್.ಮೆಂಡನ್.

<u>ಪ್ರವಾಸಿ ಮಂದಿರವನ್ನು ಮೇಲ್ದರ್ಜೆಗೇರಿಸುವುದು</u>

346 (1742) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) :– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಪುವಿನಲ್ಲಿ ಹಳೆಯ ಪ್ರವಾಸಿ ಮಂದಿರವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದು ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವುದು ಇದನ್ನು ಮೇಲ್ದರ್ಜೆಗೇರಿಸಲು ಸರ್ಕಾರದಲ್ಲಿ ಪ್ರಸ್ತಾವನೆ ಇದೆಯೇ;

ಇ) ಹಾಗಿದ್ದಲ್ಲಿ, ಯಾವಾಗ ಮೇಲ್ದರ್ಜೆಗೇರಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಕಾಪುವಿನಲ್ಲಿ ಹಳೆಯ ಪ್ರವಾಸಿ ಮಂದಿರವು ತಾಲ್ಲೂಕು ಪಂಚಾಯತ್ ಅಧೀನದಲ್ಲಿರುತ್ತದೆ.

ಆ) ಪ್ರವಾಸಿ ಮಂದಿರವು ತಾಲ್ಲೂಕು ಪಂಚಾಯತ್ ಅಧೀನದಲ್ಲಿರುವುದರಿಂದ ಇದನ್ನು ಮೇಲ್ದರ್ಜೆಗೇರಿಸುವುದು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.

ಇ) ಉದ್ಧವಿಸುವುದಿಲ್ಲ.

(x) ಶ್ರೀ ಲಾಲಾಜಿ ಆರ್. ಮೆಂಡನ್ :– ನಮ್ಮ ಕಾಪು ಪ್ರವಾಸಿ ಮಂದಿರ ಬಹಳ ಹಳೆಯ ಕಾಲದ ಕಟ್ಟಡ. ಕಾಪುವಿನಲ್ಲಿ ಪ್ರವಾಸೋದ್ಯಮ ಆಕರ್ಷಣೆಯಾದ ದೀಪಸ್ತಂಭ ಮತ್ತು ಧಾರ್ಮಿಕ ದೇವಸ್ಥಾನಗಳು ಇರುವುದರಿಂದ ಲಕ್ಷಾಂತರ ಜನರು ಪ್ರವಾಸಿ ಕೇಂದ್ರಗಳಿಗೆ ಪ್ರವಾಸಿಗರು ಬರುತ್ತಿದ್ದಾರೆ. ಹೀಗಾಗಿ ಈಗಿರುವ ಹಳೆಯ ಪ್ರವಾಸಿ ಮಂದಿರವನ್ನು ಉನ್ನತ ದರ್ಜೆಗೇರಿಸಬೇಕು, ಏಕೆಂದರೆ, ಈಗ ಕೇವಲ ಒಂದು ಕೊಠಡಿ ಮತ್ತೊಂದು ಸಭಾಂಗಣ ಮಾತ್ರ ಇದೆ. ಕನಿಷ್ಠ ಐದಾರು ಕೊಠಡಿಗಳನ್ನಾದರೂ ಮಾಡಬೇಕು. ತಾಲ್ಲೂಕು ಪಂಚಾಯಿತಿಯ ಅಧೀನದಲ್ಲಿದ್ದರೂ ಕೂಡ ಇದನ್ನು ಲೋಕೋಪಯೋಗಿ ಇಲಾಖೆಯಿಂದ ಸಹಾಯಾಸ್ತ ನೀಡಿ ಆ ಕಟ್ಟಡ ದುರಸ್ತಿಗೊಳಿಸಬೇಕು, ಮತ್ತೆ ಕನಿಷ್ಟ 4–5 ಕೊಠಡಿಗಳಿಗೆ ವಿಸ್ತರಣೆ ಮಾಡಲಿಕ್ಕೆ ಅವಕಾಶ ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಿಗೆ ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :– ಮಾನ್ಯ ಅಧ್ಯಕ್ಷರೆ, ಕಾಪು ಒಳ್ಳೆಯ ಯಾತ್ರಾಸ್ಥಳ ಮತ್ತು ಅಲ್ಲಿಗೆ ಅನೇಕ ಪ್ರವಾಸಿಗರು ಬರುತ್ತಾರೆ ಎನ್ನುವುದು ನಿಜ. ಆದರೆ, ಈ ಪ್ರವಾಸಿ ಮಂದಿರ ಹಳೆಯ ಪ್ರವಾಸಿ ಮಂದಿರ. ಅದು ತಾಲ್ಲೂಕು ಪಂಚಾಯಿತಿಯ ಕಟ್ಟಡ. ಅದು ಅವರ ಸ್ವಾಧೀನದಲ್ಲಿ ಮತ್ತು ಅವರ ಸುಪರ್ದಿನಲ್ಲಿರತಕ್ಕಂಥ ಕಟ್ಟಡ. ಲೋಕೋಪಯೋಗಿ ಇಲಾಖೆಯವರು ಆ ತಾಲ್ಲೂಕು ಪಂಚಾಯಿತಿಯ ಆಸ್ತಿಯ ಮೇಲೆ ಖರ್ಚು ಮಾಡುವುದಕ್ಕೆ ಬರುವುದಿಲ್ಲ. ಆ ಕಾರಣಕ್ಕಾಗಿ ಅದನ್ನು ದುರಸ್ತಿ ಮಾಡುವುದಾಗಲಿ, ಅದನ್ನು ಬಡಾವಣೆ ಮಾಡತಕ್ಕಂಥದ್ದಾಗಲಿ ಸಾಧ್ಯವಿಲ್ಲದ ವಿಚಾರ. ಆದರೆ, ತಾವು ಹೊಸ ಪ್ರವಾಸಿ ಮಂದಿರ ಬೇಕೆಂದು ಲೋಕೋಪಯೋಗಿ ಇಲಾಖೆಗೆ ಪತ್ರ ಬರೆದರೆ ಖಂಡಿತವಾಗಿ ಅದನ್ನು ಪರಿಗಣಿಸಿ ಮಂಜೂರಾತಿ ಮಾಡಲಾಗುವುದು.

ಶ್ರೀ ಲಾಲಾಜಿ ಆರ್. ಮೆಂಡನ್ :– ವಂದನೆಗಳು.

(x) ಮಾನ್ಯ ಸದಸ್ಯರಿಂದ ಪರಿಷ್ಕೃತಗೊಂಡಿದೆ.